ಹೆಗ್ಗಡದೇವನಕೋಟೆ ತಾಲ್ಲುಕು ಒಳಗೊಂಡಂತೆ ಇರುವ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವನದಲ್ಲಿ ಮರಗಳನ್ನು ತೆಗೆಯಲು ವನ್ಯಜೀವಿ ಕಾಯಿದೆ 1972ರ ಪ್ರಕಾರ ಅವಕಾಶವಿರುವುದಿಲ್ಲ. ಆದಾಗ್ಯೂ ಸಹಿತ ವನ್ಯ ಪ್ರಾಣಿಗಳ ವೀಕ್ಷಣೆಗೆ ಅನುಕೂಲವಾಗುವಂತೆ ಹಾಗೂ ವನ್ಯ ಪ್ರಾಣಿಗಳ ಹಿತ ದೃಷ್ಟಿಯಿಂದ ವೀಕ್ಷಣಾ ರೇಖೆಯಲ್ಲಿ ಬಿದ್ದಿರುವ ಕೆಲವು ಮರಗಳನ್ನು ಮಾತ್ರ ತೆಗೆಯಲಾಗಿದೆ. ಈ ಸಾಲಿನಲ್ಲಿ ಒಟ್ಟು 284 ಘನ ಮೀಟರ್ ಮರಗಳನ್ನು ಈ ರೀತಿ ತೆಗೆಯಲಾಗಿರುತ್ತದೆ. ಹಾಗೆ ತೆಗೆಯಲಾದ ಮರವನ್ನು ಹೆಸರಾಂತ ಡಿಪೋ ಆದ ಹುಣಸೂರು ಟಿಂಬರ್ ಡಿಪೋಗೆ ಸಾಗಿಸಿದ್ದು, ಇಲ್ಲಿಯವರೆಗೆ 256ಘನ ಮೀಟರ್ ಮರವನ್ನು ಸಾಗಾಣಿಕೆ ಮಾಡಲಾಗಿದೆ. ಹುಣಸೂರು ಡಿಪೋದಲ್ಲಿ ಹರಾಜು ಮಾಡಿದರೆ ಸರ್ಕಾರಕ್ಕೆ ಹೆಚ್ಚುವರಿ ಆದಾಯ ಬರುವುದೆಂಬ ದೃಷ್ಟಿಯಿಂದ ಈ ಕ್ರಮವನ್ನು ಇಲಾಖೆಯ ಅಧಿಕಾರಿಗಳು ತೆಗೆದುಕೊಂಡಿದ್ದು, ಇದರಿಂದ ಸರ್ಕಾರಕ್ಕೆ ಹೆಚ್ಚಿನ ಲಾಭವಾಗಿದೆಯೇ ಹೊರತು ಯಾವುದೇ ನಷ್ಟ ಆಗಿರುವುದಿಲ್ಲ. ಉಳಿದ ಸುಮಾರು 25 ಘನ ಮೀಟರ್ ಮರವನ್ನು ಎರೆಹಳ್ಳಿ ಟಿಂಬರ್ ಡಿಪೋಗೆ ಸಾಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಉಳಿದ ಅರಣ್ಯ ಪ್ರದೇಶಗಳಲ್ಲಿ ಮರ ತೆಗೆಯುವ ಕಾರ್ಯಕ್ರಮವಿದ್ದಂತೆ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಹೊಂದಿಕೊಂಡತೆ ಇರುವ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವನದಿಂದ ಮರ ತೆಗೆಯುವ ಕಾರ್ಯಕ್ರಮವಿರುವುದಿಲ್ಲ. ಆದ್ದರಿಂದ ಯಾವುದೇ ತಾಲ್ಲೂಕಿನ ಜನರು ರಾಷ್ಟ್ರೀಯ ಉದ್ಯಾನವನವನ್ನು ಮರುಮುಟ್ಟುಗಳಿಗೆ ಅವಲಂಭಿಸಲಾಗುವುದಿಲ್ಲ ಈ ಹಿನ್ನೆಲೆಯಲ್ಲಿ ವೀಕ್ಷಣಾ ರೇಖೆಯನ್ನು ಉತ್ತಮಗೊಳಿಸುವ ಸಲುವಾಗಿ ತೆಗೆದಿರುವ ಅಲ್ಪ ಪ್ರಮಾಣದ ಮರವನ್ನು ಸರ್ಕಾರದ ಹಿತ ದೃಷ್ಟಿಯಿಂದ ಮಾತ್ರ ಹುಣಸೂರು ಟಿಂಬರ್ ಡಿಪೋಗೆ ಸಾಗಿಸಲಾಗಿರುತ್ತದೆ. ಎರೆಹೆಳ್ಳಿ ಡಿಪೋದಲ್ಲಿ ಇನ್ನೂ ಹೆಚ್ಚಿನ ಮರದ ಅವಶ್ಯಕತೆ ಇದ್ದಲ್ಲಿ ವೀಕ್ಷಣಾ ರೇಖೆಯಿಂದ ತೆಗೆಯಲಾಗುವ ಅಲ್ಪ ಪ್ರಮಾದ ಮರವನ್ನು ಎರೆಹಳ್ಳಿ ಡಿಪೋಗೆ ಸಾಗಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲಾಗುವುದು ಎರೆಹಳ್ಳಿ ಡಿಪೋದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿವರ್ಗದವರಿಗೆ ತಿಂಗಳಿಗೆ ಅಂದಾಜು 30 ರಿಂದ 35 ಸಾವರಿದವರೆಗೆ ವೆಚ್ಚವಾಗುತ್ತಿದೆ.

(ಈ) ಲಕ್ಷ್ಮೇಶ್ವರದಲ್ಲಿ 30 ಹಾಸಿಗೆಯ ದವಾಖಾನೆಯಲ್ಲಿ ವೈದ್ಯಾಧಿಕಾರಿಗಳು, ಎಕ್ಸರೇ ಮಿಷನ್ ಮತ್ತು ದಾಯಿಗಳು ಇಲ್ಲದೆ ತೊಂದರೆ.

ಶ್ರೀ ಜಿ.ಎಂ. ಮಹಂತ ಶೆಟ್ಟರ್ (ಶಿರಹಟ್ಟಿ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ನನ್ನ ಶಿರಹಟ್ಟಿ ಕ್ಷೇತ್ರದ ಲಕ್ಷ್ಮೇಶ್ವರದಲ್ಲಿ 30 ಹಾಸಿಗೆಗಳ ದವಾಖಾನೆಯಲ್ಲಿ ಐದಾರು ವರ್ಷವಾಗಿದೆ. ಐದಾರು ವರ್ಷಆದರೂ ಅಲ್ಲಿ ವೈದ್ಯಾಧಿಕಾರಿಗಳು ಇಲ್ಲ, ಎಕ್ಸರೇ ಮಿಷನ್ ಇರುವುದಿಲ್ಲ, ದಾಯಿಗಳು ಇರುವುದಿಲ್ಲ, ಇದನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಎಂ.ಸಿ. ನಾಣಯ್ಯ (ವಾರ್ತೆ ಮತ್ತು ಪ್ರಸಾರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಆಸ್ಪತ್ರೆ, ಲಕ್ಷ್ಮೇಶ್ವರ ಇದು 30 ಹಾಸಿಗೆಗೆ ಮೇಲ್ದರ್ಜೆಗೇರಿಸಿರುತ್ತದೆ. ಇಲ್ಲಿ ಈ ಹಿಂದೆ 2 ವೈದ್ಯ ಹುದ್ದೆಗಳು ಮಂಜೂರಾಗಿದ್ದು, ಈ 2

ಹುದ್ದೆಗಳಲ್ಲಿಯೂ ವೈದ್ಯರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ, ಆಕುಕ 210 ಆಯೋಸಂ 94 ದಿನಾಂಕ: 3-11-95 ರಲ್ಲಿ ಹೆಚ್ಚುವರಿಯಾಗಿ 1 ವೈದ್ಯ ಹುದ್ದೆ ಹಾಗೂ 1 ದಂತ ವೈದ್ಯರ ಹುದ್ದೆ ಹಾಗೂ 1 ಸ್ಟಾಫ್ ನರ್ಸ್ ಹುದ್ದೆ ಮಂಜೂರಾಗಿರುತ್ತದೆ. ಹೊಸದಾಗಿ ಮಂಜೂರಾದ ಹುದ್ದೆಗಳನ್ನು ಮುಂಬರುವ ದಿನಗಳಲ್ಲಿ ಆದ್ಯತೇ ಮೇಲೆ ಭರ್ತಿ ಮಾಡಲಾಗುವುದು.

ಕ್ಷಕಿರಣ ಯಂತ್ರಗಳನ್ನು ಖರೀದಿಸುವುದು ಆಯಾ ಜಿಲ್ಲಾ ಪಂಚಾಯತಗಳ ಆಡಳಿತಕ್ಕೆ ಒಳಪಟ್ಟಿದ್ದರಿಂದ 1993-94ನೇ ಸಾಲಿನ ಕ್ಷಕಿರಣ ಯಂತ್ರದ ದರ ಗುತ್ತಿಗೆಯನ್ನು ಜಿಲ್ಲಾ ಪಂಚಾಯತ್, ಧಾರವಾಡ ಜಿಲ್ಲೆ ಇವರಿಗೆ ಕಳುಹಿಸಿ ಕೊಡಲಾಗಿತ್ತು ಹಾಗೂ 1994-95ನೇ ಸಾಲಿನಲ್ಲಿ ಕ್ಷ ಯಂತ್ರದ ದರ ಗುತ್ತಿಗೆಯನ್ನು ಜಿಲ್ಲಾ ಪಂಚಾಯತ್, ಧಾರವಾಡ ಜಿಲ್ಲೆ ಇವರಿಗೆ ಕಳುಹಿಸಿ ಕೊಡಲಾಗಿತ್ತು ಹಾಗೂ 1994-95ನೇ ಸಾಲಿನಲ್ಲಿ ಕ್ಷ ಕಿರಣ ಯಂತ್ರಗಳಿಗೆ ದರ ಗುತ್ತಿಗೆ ನಿಗಧಿಪಡಿಸಲು ಈ ನಿರ್ದೇಶನಾಲಯದಿಂದ ಅಧಿಕೃತ ಪ್ರಕಟಣೆ ಕರೆಯಾಗಿದ್ದು ಇದರ ದರಗುತ್ತಿಗೆ ನಿಗಧಿಪಡಿಸುವುದು ಅಂತಿಮ ಹಂತದಲ್ಲಿ ಇರುತ್ತದೆ. ಇದು ನಿಗದಿಯಾದ ನಂತರ ಇದರ ಪ್ರತಿಯನ್ನು ಜಿಲ್ಲಾ ಪಂಚಾಯತ್, ಧಾರವಾಡ ಜಿಲ್ಲೆ ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗುವುದು.

4.40 ಪಿ.ಎಂ.

(ಉ) ಆರಾಧನಾ ಯೋಜನೆಯಡಿಯಲ್ಲಿ ಹಣವನ್ನು ಒದಗಿಸುವ ಬಗ್ಗೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ ಕ್ಷೇತ್ರ) : ಸನ್ಮಾನ್ಯ ಅಧ್ಯಕ್ಷರೆ, ಕಳೆದ ಕೆಲವು ವರ್ಷಗಳಿಂದ ಆರಾಧನಾ ಯೋಜನೆಯ ಪ್ರಕಾರ ಹಿಂದುಳಿದ ವರ್ಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರು ವಾಸ್ತವ್ಯಾವಿರುವ ಪ್ರದೇಶದಲ್ಲಿರುವ ಅಜೀರ್ಣಾವಸ್ಥೆಯಲ್ಲಿರುವ ಮಂದಿರಗಳ ನಿರ್ಮಾಣಕ್ಕೆ ಹಣ ಒದಗಿಸುವ ವ್ಯವಸ್ಥೆ ಇತ್ತು. ಹಣವನ್ನು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಸದರಿ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಆರಾಧನಾ ಸಮಿತಿಯ ಮೂಲಕ ಒದಗಿಸಲಾಗುತ್ತಿತ್ತು. ಆದರೆ ಹೊಸ ಸರ್ಕಾರ ಬಂದಮೇಲೆ ಈ ಯೋಜನೆ ಸಂಪೂರ್ಣ ಸ್ಥಗಿತಗೊಂಡಿದೆ. ಮಾನ್ಯ ಕಂದಾಯ ಸಚಿವರಿಂದ ಆರಾಧನಾ ಯೋಜನೆಯ ಬಗ್ಗೆ ಪತ್ರ ಬಂದಿದ್ದರೂ ಕೆಲಸ ನಡೆಯುತ್ತಾ ಇಲ್ಲ. ಈ ಯೋಜನೆಯ ಪರಿಸ್ಥಿತಿ ಏನು? ಆರಾಧನಾ ಯೋಜನೆ ಇದೆಯೇ? ಆರಾಧನಾ ಸಮಿತಿ ರಚಿಸಲಾಗಿದೆಯೇ? ರಚಿಸಲಾಗಿಲ್ಲವಾದರೆ ಯಾವ ರೀತಿ ಯಾವಾಗ ರಚಿಸಲಾಗುವುದು. ಈ ಬಗ್ಗೆ ಮಾನ್ಯ ಕಂದಾಯ ಸಚಿವರು ಮಾಹಿತಿ ಒದಗಿಸಬೇಕಾಗಿ ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ,

ಆರಾಧನಾ ಯೋಜನೆಯಡಿಯಲ್ಲಿ ಹಿಂದಿನ ವರ್ಷಗಳಲ್ಲಿ ಈ ಕೆಳಕಂಡಂತೆ ಹಣವನ್ನು ಒದಗಿಸಲಾಗಿದೆ.

1991-92	ರೂ.	5.00 ಕೋಟಿ
1992-93	ರೂ.	5.00 ಕೋಟಿ
1993-94	ರೂ.	8.00 ಕೋಟಿ
1994-95	ರೂ.	6.71 ಕೋಟಿ